## ಗವಾಕ್ಷಿಯಲ್ಲಿ ಬಂತು*

# ಭೂಸ್ವಾಧೀನ

## ಬ್ರಿಟೀಷ್
## ವಸಾಹತುಶಾಹಿ
## ಗುಲಾಮಗಿರಿ
## ಮಸೂದೆ

* 'ಹೋದೆಯಾ ಪಿಶಾಚಿ' ಅಂದರೆ 'ಗವಾಕ್ಷಿಯಲ್ಲಿ ಬಂದೆ' ಅಂದಿತು–
**– ಒಂದು ಗಾದೆ**

ಪ್ರಕಟಣೆ
**ಭೂಸ್ವಾಧೀನ ಮಸೂದೆ ತಿದ್ದುಪಡಿ ವಿರೋಧಿ ಸಮಿತಿ**
ಕರ್ನಾಟಕ ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್
ದಳವಾಯಿ ಕಟ್ಟಡ, ಮೈಸೂರು ಮಹಾನಗರ ಪಾಲಿಕೆ ಹಿಂಭಾಗ, ಮೈಸೂರು – 570 024
ದೂರವಾಣಿ: 0821–2446377, ಇಮೇಲ್: kriemys@rediffmail.com

# ಭೂಸ್ವಾಧೀನ ಸುಗ್ರೀವಾಜ್ಞೆ ಕಾಯ್ದೆ – ಒಳಗೆ ಏನಿದೆ?

ಪ್ರಜಾಪ್ರಭುತ್ವ ಎಂದರೆ ಸಾರ್ವಜನಿಕರ ಹಿತರಕ್ಷಣೆಗಾಗಿ ನಡೆಯುವ ಪ್ರಯೋಗಗಳ ವ್ಯವಸ್ಥೆಯಾಗಿದೆ. ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಯಾವುದೇ ಸರ್ಕಾರ ಬಹುಮತಕ್ಕೆ ಇರುವ ಶಕ್ತಿಯನ್ನು ಮನಸೋಇಚ್ಛೆ ಬಳಸಲಾಗದು. ಯಾವುದೇ ಸರ್ಕಾರಕ್ಕೆ ತಾನು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರದ ಬಗ್ಗೆಯೂ ಸಕಾರಣಗಳನ್ನು ನೀಡುವ ಹೊಣೆಗಾರಿಕೆ ಇದ್ದೇ ಇರುತ್ತದೆ. ಅಷ್ಟೇ ಅಲ್ಲ, ಇದನ್ನು ಮುಕ್ತವಾಗಿಯೇ ಮಾಡಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ಕಾನೂನಿನ ಕುರಿತೂ ಸಂಸತ್ತಿನಲ್ಲಿ ಚರ್ಚೆ ನಡೆಸುವ ಸಂಪ್ರದಾಯವನ್ನು ನಾವು ಪಾಲಿಸಿಕೊಂಡು ಬಂದಿದ್ದೇವೆ. ಆದರೆ ಕೇಂದ್ರ ಸರ್ಕಾರವು 2013ರ ಭೂಸ್ವಾಧೀನ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದ ರೀತಿಯು ಮೇಲಿನ ಆಶಯಕ್ಕೆ ವ್ಯತಿರಿಕ್ತವಾಗಿದ್ದು, ಸಾರ್ವಜನಿಕ ಹಿತರಕ್ಷಣೆಯ ಕಾಳಜಿಯಿಲ್ಲದ ಪ್ರಭುತ್ವದ ಪ್ರಯೋಗವಾಗಿದೆ.

ಈ ಮುಂಚೆ ಅಸ್ತಿತ್ವದಲ್ಲಿದ್ದ ವಸಾಹತುಶಾಹಿ ಕಾಲದ ೧೮೯೪ರ ಭೂಸ್ವಾಧೀನ ಕಾಯ್ದೆಗೆ ಬದಲಾಗಿ ೨೦೧೩ರ ಭೂಸ್ವಾಧೀನ, ಪುನಶ್ಚೇತನ ಮತ್ತು ಪುನರ್ವಸತಿ ಕಾಯ್ದೆ (ಎಲ್‌ಎಆರ್‌ಆರ್–೨೦೧೩) ಕಳೆದ ವರ್ಷ ಜಾರಿಗೆ ಬಂದಿತ್ತು. ನ್ಯಾಯಯುತ ಪರಿಹಾರ ಮತ್ತು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಈ ಕಾಯ್ದೆಯ ಮುಖ್ಯ ಅಂಶಗಳಾಗಿದ್ದವು. ವಸಾಹತುಶಾಹಿ ಕಾಲದ ನಿರ್ದಯ ಕಾಯ್ದೆಯನ್ನು ಬದಲಾಯಿಸಬೇಕೆಂದು ಒತ್ತಾಯಿಸಿ ದೇಶದಾದ್ಯಂತ ಹಲವು ದಶಕಗಳ ಕಾಲ ಅದೆಷ್ಟೋ ಚಳವಳಿಗಳು ನಡೆದಿದ್ದರ ಫಲವಾಗಿ ಇದು ಜಾರಿಗೊಂಡಿತ್ತು. ಭೂಸ್ವಾಧೀನದಿಂದ ಸಂತ್ರಸ್ತರಾಗುವ ರೈತರನ್ನು ಕೇವಲ ಪ್ರಜೆಗಳನ್ನಾಗಿ ಪರಿಭಾವಿಸದೆ, 'ಹಕ್ಕುಳ್ಳ ಪ್ರಜೆಗಳು' ಎಂದು ಪರಿಗಣಿಸಬೇಕು ಎಂಬುದು ಈ ಚಳವಳಿಗಳ ಆಗ್ರಹವಾಗಿತ್ತು. ಈ ಕಾಯ್ದೆಯಲ್ಲಿ ಯಾವುದೇ ಭೂಸ್ವಾಧೀನಕ್ಕೆ ಮುನ್ನ ಭೂಮಿಯ ಮಾಲೀಕರ ಒಪ್ಪಿಗೆ, ಸಾಮಾಜಿಕ ಪರಿಣಾಮದ ಮೌಲ್ಯಮಾಪನ. ಪರಿಸರ ಮತ್ತು ಆಹಾರ ಭದ್ರತೆಯ ಮೇಲಾಗುವ ಪರಿಣಾಮಗಳ ಪರಾಮರ್ಶೆಯನ್ನು ಕಡ್ಡಾಯಗೊಳಿಸಲಾಗಿತ್ತು. ಸಂತ್ರಸ್ತರಿಗೆ ಹೆಚ್ಚಿನ ಮೊತ್ತದ ಪರಿಹಾರ, ಮಾನವೀಯ ನೆಲೆಯಲ್ಲಿ ಪುನಶ್ಚೇತನ ಮತ್ತು ಪುನರ್ವಸತಿ ಕಲ್ಪಿಸಬೇಕೆಂಬ ನಿಬಂಧನೆಗಳನ್ನೂ ಕಾನೂನು ಒಳಗೊಂಡಿತ್ತು.

ಈಗಿನ ಸುಗ್ರಿವಾಜ್ಞೆಯು ಭೂಮಿಯ ಮಾಲೀಕರ ಸಮ್ಮತಿ, ಸಾಮಾಜಿಕ ಪರಿಣಾಮದ ಅವಲೋಕನ, ಆಹಾರ ಭದ್ರತೆ ಮೌಲ್ಯಮಾಪನ ಈ ಎಲ್ಲಾ ನಿಬಂಧನೆಗಳನ್ನು ಒಂದೇ ಬೀಸಿನಲ್ಲಿ ಆಪೋಷನ ತೆಗೆದುಕೊಂಡುಬಿಟ್ಟಿದೆ. ಜೊತೆಗೆ ಖಾಸಗಿ ಉದ್ದೇಶಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳುವ ಪ್ರಸಂಗ ಎದುರಾಗಿದ್ದೇ ಆದರೆ, ಈ ಸುಗ್ರಿವಾಜ್ಞೆಯು ಅದಕ್ಕೂ ಅನುಕೂಲ ಮಾಡಿಕೊಟ್ಟಿದೆ. ಖಾಸಗಿ ಉದ್ದೇಶಗಳಿಗೆ ಭೂಸ್ವಾಧೀನದ ಮೇಲೆ ವಿಧಿಸಲಾಗಿದ್ದ ನಿಷೇಧವನ್ನೂ ಈಗ ತೆರವುಗೊಳಿಸಲಾಗಿದೆ. ಹೀಗಾಗಿ ಈ ಹಿಂದಿನ ಕಾಯ್ದೆ ಸಂಪೂರ್ಣ ನಿರರ್ಥಕವಾದಂತೆಯೇ ಆಗಿದೆ.

ಹೀಗಾಗಿ ಈ ಸುಗ್ರೀವಾಜ್ಞೆಯನ್ನು ಕೇವಲ ತಿದ್ದುಪಡಿ ಮಾತ್ರ ಎಂದು ಕರೆಯಲಾಗದು. ಇದು ಎಲ್‌ಎಆರ್‌ಆರ್–2013 ಕಾಯ್ದೆಯ ಮೂಲ ಆಶಯ ಮತ್ತು ಉದ್ದೇಶವನ್ನೇ ನಿರರ್ಥಕಗೊಳಿಸುತ್ತದೆ. ಇದರಿಂದಾಗಿ ಪುನಃ ಓಬಿರಾಯನ, ವಸಾಹತುಶಾಹಿ ಕಾಲದ ಲೂಟಿಕೋರ ಎನ್ನಬಹುದಾದ 1894ರ ಭೂಕಾಯ್ದೆಯೇ ಮತ್ತೆ ಅಸ್ತಿತ್ವಕ್ಕೆ ಬಂದಂತೆ ಆಗಿದೆ. ಕೆಲವು ವಿಷಯಗಳಲ್ಲಂತೂ ಇದು ವಸಾಹತುಶಾಹಿ ಕಾಲದ ಕಾನೂನಿಗಿಂತಲೂ ಹೀನಾಯವಾಗಿದೆ. 1894ರ ಕಾಯ್ದೆಯಲ್ಲಿ ಸಂತ್ರಸ್ತ ಭೂಮಾಲೀಕರಿಗೆ ಆಕ್ಷೇಪ ಎತ್ತಲು ಹಾಗೂ ತಮ್ಮ ಕಷ್ಟ ಹೇಳಿಕೊಳ್ಳುವ ಅವಕಾಶವಾದರೂ ಇತ್ತು. ಆದರೆ ಈಗ ಸುಗ್ರಿವಾಜ್ಞೆಯಲ್ಲಿ ಇಡೀ ವಿಧಿವಿಧಾನದ ಅಗತ್ಯಗಳನ್ನೇ ಬೈಪಾಸ್ ಮಾಡಿರುವುದರಿಂದ ಜಮೀನಿನ ಮಾಲೀಕರಿಗೆ ಕನಿಷ್ಠ ರಕ್ಷಣೆಯೂ ಇಲ್ಲದಂತೆ ಆಗಿದೆ. ಒಟ್ಟಾರೆ ಇದು ರಿಯಲ್ ಎಸ್ಟೇಟಿಗರು–ಉದ್ದಿಮೆ–ಕಾರ್ಪೊರೇಟ್‌ಗಳ ಹಿತರಕ್ಷಣೆಗಾಗಿ ನಡೆಯುತ್ತಿರುವ ಪೈಪೋಟಿಯಾಗಿದೆ. ಆದರೆ ಈ ಪೈಪೋಟಿಯ ಒಂದೆಡೆ ಅತ್ಯಂತ ಪ್ರಭಾವಿಗಳು ಇದ್ದರೆ, ಮತ್ತೊಂದೆಡೆ ಯಾವ ಪ್ರಭಾವವೂ ಇಲ್ಲದ ಸಮುದಾಯ ಇದೆ.

**ಪ್ರಸ್ತಾವನೆ ಕೃಪೆ: ಶ್ರೀ ಯೋಗೇಂದ್ರ ಯಾದವ್**

**ಸಂಗ್ರಹ ನಿರೂಪಣೆ: ಶ್ರೀ ಲಕ್ಷ್ಮಣ. ಎಂ**

**[ಸೂಚನೆ: ಈ ಅಭಿಪ್ರಾಯಗಳಿಗೆ ಸಹಮತ ವ್ಯಕ್ತಪಡಿಸುವ ವ್ಯಕ್ತಿ / ಸಂಘಟನೆಗಳು ಈ ಕಿರುಹೊತ್ತಿಗೆಯನ್ನು ಯಥಾವತ್ತಾಗಿ ತಮ್ಮ ಅಥವಾ ತಮ್ಮ ಸಂಘಟನೆಯ ಹೆಸರಿನಲ್ಲಿ ಪ್ರಕಟಿಸಿ ಹಂಚಬಹುದು.]**

# ಕೇಂದ್ರ ಸರ್ಕಾರ ಕಾಯ್ದೆಗೆ ಸುಗ್ರೀವಾಜ್ಞೆ ಹೊರಡಿಸಿರುವ ಪ್ರಮುಖವಾದ ಅಂಶಗಳ ಪಟ್ಟಿ

| ಹಿಂದಿನ ಯುಪಿಎ ಸರ್ಕಾರದ ಭೂಸ್ವಾಧೀನ ಕಾಯ್ದೆ | ಹಾಲಿ ಎನ್‌ಡಿಎ ಸರ್ಕಾರದ ಸುಗ್ರೀವಾಜ್ಞೆ |
|---|---|
| ಸಾಮಾಜಿಕ ಸಮಗ್ರ ಪರಿಣಾಮಗಳ ಅಧ್ಯಯನದ ವರದಿ (Social Impact Assessment Report) ಕಡ್ಡಾಯ | ರಕ್ಷಣೆ, ಭದ್ರತೆ, ಮೂಲಸೌಕರ್ಯ, ಕೈಗಾರಿಕಾ ಕಾರಿಡಾರ್, ಸಾಮಾಜಿ–ಕ ಮೂಲ ಸೌಕರ್ಯ ಮತ್ತು ಪಿಪಿಪಿ ಮಾದರಿ ಯೋಜನೆಗಳಿಗೆ ಕಡ್ಡಾಯ ಅಗತ್ಯವಿಲ್ಲ. |
| ಪರಿಸರದ ಮೇಲೆ ಆಗುವ ಪರಿಣಾಮದ ವರದಿ (Environment Impact Assessment Report) ಕಡ್ಡಾಯ | ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನುಗಳಿಗೆ ಮಾತ್ರ ಈ ವರದಿ ಅವಶ್ಯಕತೆ. |
| ನುರಿತ ತಜ್ಞರ ತಂಡದ ವರದಿ (Technical Expertise Committee Report) ಕಡ್ಡಾಯ | ಈ ವರದಿಯೇ ಬೇಕಿಲ್ಲ |
| ಜಿಲ್ಲಾಧಿಕಾರಿಗಳ ಸಮಗ್ರ ವರದಿ | ಈ ವರದಿ ಕಡ್ಡಾಯವೇನಿಲ್ಲ. |
| ಭೂಮಿ ಕಳೆದುಕೊಳ್ಳುವ ರೈತರ ಒಪ್ಪಿಗೆ ಕಡ್ಡಾಯ. ಸಾರ್ವಜನಿಕ ಯೋಜನೆಗಳಿಗೆ ಅಥವಾ ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಯೋಜನೆಗಳಿಗೆ ಮತ್ತು ಖಾಸಗಿ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳಲು ಶೇ.80 ರಷ್ಟು ಭೂ ಸಂತ್ರಸ್ತರ ಒಪ್ಪಿಗೆ ಬೇಕು. | ಭೂ ಸಂತ್ರಸ್ತರ ಒಪ್ಪಿಗೆ ಕಡ್ಡಾಯವಿಲ್ಲ. |

| | |
|---|---|
| ಖಾಸಗಿ ಆಸ್ಪತ್ರೆ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರದಿಂದ ಭೂಸ್ವಾಧೀನಪಡಿಸಿಕೊಳ್ಳಲು ಈ ಕಾಯ್ದೆಯಲ್ಲಿ ಅವಕಾಶವಿಲ್ಲ. | ಖಾಸಗಿ ಆಸ್ಪತ್ರೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಸರ್ಕಾರ ಭೂಸ್ವಾಧೀನಪಡಿಸಿಕೊಂಡು ಈ ವಲಯಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ. |
| ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮತ್ತು ಎನ್‌ಜಿಓಗಳಿಗೆ ಲೇಔಟ್ ಮಾಡಲು ಅಥವಾ ಖಾಸಗೀ ಉದ್ದೇಶಕ್ಕೆ ಜಾಗ ಪಡೆಯಲು ಈ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಅವಕಾಶವಿರಲಿಲ್ಲ. | ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮತ್ತು ಎನ್‌ಜಿಓಗಳಿಗೆ ಲೇಔಟ್ ಮಾಡಲು ಅಥವಾ ಖಾಸಗೀ ಉದ್ದೇಶಕ್ಕೆ ಜಾಗ ಪಡೆಯಲು ತಿದ್ದುಪಡಿ ತಂದಿರುವ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಅವಕಾಶವಿದೆ |
| ಬಹು ಬೆಳೆ ಬೆಳೆಯುವ ಭೂಮಿಯನ್ನು ಜಿಲ್ಲೆಯ ಒಟ್ಟು ಭೂಮಿಯ ಶೇ.5 ರಷ್ಟು ಮಾತ್ರ ಭೂಸ್ವಾಧೀನಪಡಿಸಿಕೊಳ್ಳಲು ಅವಕಾಶ. | ಬಹು ಬೆಳೆ ಬೆಳೆಯುವ ಭೂಮಿಯನ್ನು ಶೇ.100 ರಷ್ಟು ಭೂಸ್ವಾಧೀನಪಡಿಸಿಕೊಳ್ಳಲು ಅವಕಾಶ. |
| ಭೂಸ್ವಾಧೀನ ಆಗಿ 5 ವರ್ಷವಾದರೂ ಬಳಕೆಯಾಗದಿದ್ದರೆ, ಮೂಲ ಭೂಮಾಲೀಕರಿಗೆ ಭೂಮಿ ಹಿಂತಿರುಗಿಸಬೇಕು. | ನಿಗದಿತ ಅವಧಿ ಮೀರಿದರೂ, ಸರ್ಕಾರ ಯೋಜನೆಗೆ ಭೂಮಿಯನ್ನು ಬಳಸದಿದ್ದರೂ, ಅದನ್ನು ದೀರ್ಘಕಾಲ ತನ್ನ ಬಳಿಯೇ ಇಟ್ಟುಕೊಳ್ಳಬಹುದು. |
| ಸಾರ್ವಜನಿಕರ ಆಕ್ಷೇಪಣೆಗಳಿಗೆ ಅವಕಾಶ ನೀಡಿ, ಅವುಗಳನ್ನು ಪರಿಗಣಿಸಬೇಕು. | ಬೇಕಿಲ್ಲ |
| ಫಲವತ್ತಾದ ನೀರಾವರಿ ಜಮೀನನ್ನು ಸ್ವಾಧೀನಪಡಿಸಿಕೊಂಡರೆ, ಪರಿಹಾರದೊಡನೆ ಎರಡು ಪಟ್ಟು ಜಮೀನನ್ನು ರೈತರಿಗೆ ಬೇರೆ ಕಡೆ ನೀಡಬೇಕು. | ಅನ್ವಯಿಸುವುದಿಲ್ಲ. |

| | |
|---|---|
| ಭೂಸ್ವಾಧೀನಪಡಿಸಿಕೊಳ್ಳುವಾಗ, ಪ್ರಾಥಮಿಕ ಅಧಿಸೂಚನೆ, ಅಂತಿಮ ಅಧಿಸೂಚನೆಗಳ ನಂತರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಬೇಕು. | ಭೂಸ್ವಾಧೀನ ಅಧಿಸೂಚನೆಯ 30 ದಿನದೊಳಗೆ ಭೂಮಿಯನ್ನು ವಶಪಡಿಸಿಕೊಳ್ಳಬಹುದು. |
| ಭೂಸ್ವಾಧೀನಪಡಿಸಿಕೊಳ್ಳುವಾಗ, ಸಾರ್ವಜನಿಕರ ಆಕ್ಷೇಪಣೆಗಳಿಗಾಗಿ, ಪತ್ರಿಕೆಗಳಲ್ಲಿ, ವೆಬ್‌ಸೈಟ್‌ಗಳಲ್ಲಿ ಮತ್ತು ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸಬೇಕು. | ಈ ಯಾವ ನಿರ್ಬಂಧವೂ ಇಲ್ಲ. |
| ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟಿಸುವುದಕ್ಕಿಂತ ಮುಂಚೆ ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಸಭೆಗಳ ಅನುಮತಿ ಖಡ್ಡಾಯ. | ಬೇಕಿಲ್ಲ |
| ಭೂಮಿಯನ್ನೇ ನೆಚ್ಚಿಕೊಂಡು ಜೀವನ ನಡೆಸುವವರಿಗೆ, ಕುಟುಂಬದಲ್ಲಿ ಒಬ್ಬರಿಗೆ ಆ ಸಂಸ್ಥೆಯಲ್ಲಿ ಕೆಲಸ ನೀಡಬೇಕು. | ಅನ್ವಯಿಸುವುದಿಲ್ಲ. |
| ಸಾರ್ವಜನಿಕರ ಆಕ್ಷೇಪಣೆಗಳನ್ನು ಸ್ವೀಕರಿಸಲು ಬಹಿರಂಗ ಸಭೆಯನ್ನು ಆಯೋಜಿಸಿ, ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಬೇಕು. | ಅನ್ವಯಿಸುವುದಿಲ್ಲ |
| ಭೂಮಿ ಖರೀದಿಸುವವರು ಮುಂಗಡವಾಗಿ ಹಣವನ್ನು ರೈತರ ಹೆಸರಿನಲ್ಲಿ ಡಿಪಾಸಿಟ್ ಮಾಡಿರಬೇಕು. | ಅನ್ವಯಿಸುವುದಿಲ್ಲ |

| | |
|---|---|
| ಭೂಮಿಗೆ ಪರಿಹಾರ ನೀಡುವಾಗ ಹಾಲಿ ಇರುವಂತಹ ಮಾರ್ಕೆಟ್ ಬೆಲೆಯನ್ನು ಪರಿಗಣಿಸಬೇಕು. ಮಾರ್ಕೆಟ್ ಬೆಲೆಯನ್ನು ನಿಗದಿಪಡಿಸುವಾಗ ಅಕ್ಕಪಕ್ಕದ ಊರುಗಳಲ್ಲಿರುವ ಗರಿಷ್ಟ ಬೆಲೆಯನ್ನು ತೆಗೆದುಕೊಳ್ಳಬೇಕು. | ಅನ್ವಯಿಸುವುದಿಲ್ಲ. |
| **ಪರಿಹಾರದ ಮಾನದಂಡ** | |
| ಮಾರುಕಟ್ಟೆ ಬೆಲೆ + ಶೇ.100 ರಷ್ಟು Solatium + xly by 2 (ಗ್ರಾಮೀಣ ಪ್ರದೇಶ) ಅಥವಾ xly by 3 (ನಗರ ಪ್ರದೇಶ) + ಬಿಲ್ಡಿಂಗ್/ ಮರ ಗಿಡಗಳಿಗೆ ಪ್ರತ್ಯೇಕ ಪರಿಹಾರ. | ಉದ್ಯಮಿಗಳು–ರೈತರ ನಡುವೆ ದರ ನಿಷ್ಕರ್ಷೆ ಬಗ್ಗೆ ಮಾತುಕತೆಗೆ ಅವಕಾಶ ಕಲ್ಪಿಸಲಾಗಿದೆ. |
| ಮನೆ ಕಳೆದುಕೊಂಡರೆ, ಪರ್ಯಾಯ ಮನೆಯನ್ನು ನಿರ್ಮಿಸಿಕೊಡಬೇಕು. | ಅನ್ವಯಿಸುವುದಿಲ್ಲ. |
| ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿ ಕಳೆದುಕೊಳ್ಳುವ ರೈತನಿಗೆ ಬೇರೆ ಜಮೀನು ಇಲ್ಲದಿದ್ದರೆ ಅವನ ಬದುಕಿಗೆ ಪರ್ಯಾಯ ಜಮೀನು ನೀಡಬೇಕು. | ಅನ್ವಯಿಸುವುದಿಲ್ಲ. |
| ಭೂಮಿ ಕಳೆದುಕೊಂಡ ಕುಟುಂಬಕ್ಕೆ, ಕನಿಷ್ಟ 1 ವರ್ಷವಾದರೂ ಮಾಸಿಕ 3000/ ರೂ. ನಂತೆ ಜೀವನಾಂಶ ನೀಡಬೇಕು. ಪ.ಜಾ/ಪ.ಪಂ ದವರಿಗೆ ಹೆಚ್ಚುವರಿ 50,000/– ನೀಡಬೇಕು. | ಅನ್ವಯಿಸುವುದಿಲ್ಲ. |
| ಭೂಮಿ ಕಳೆದುಕೊಂಡ ಕುಟುಂಬದವರು, ಇವರ ಸರಕುಗಳನ್ನು ಸಾಗಿಸಲು 50,000/– ರೂ. ಸಾರಿಗೆ ವೆಚ್ಚ ನೀಡಬೇಕು. | ಅನ್ವಯಿಸುವುದಿಲ್ಲ. |

| | |
|---|---|
| ಭೂಮಿ ಕಳೆದುಕೊಂಡ ಕುಟುಂಬದವರಿಗೆ, ಜಾನುವಾರುಗಳ ಪರಿಹಾರವೆಂದು 50,000/– ರೂ. ಗಳನ್ನು ನೀಡಬೇಕು. | ಅನ್ವಯಿಸುವುದಿಲ್ಲ. |
| One-time-Resettlement ಎಂದು 50,000/– ರೂ. ಗಳನ್ನು ನೀಡಬೇಕು. | ಅನ್ವಯಿಸುವುದಿಲ್ಲ. |
| ಪರ್ಯಾಯ ಭೂಮಿ ಮತ್ತು ಕಟ್ಟಡಗಳ ನೋಂದಣಿ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ. | ಅನ್ವಯಿಸುವುದಿಲ್ಲ. |
| ರೈತನು ತನ್ನ ಭೂಮಿಗೆ ತಾನೇ ಒಡೆಯ, ಆತನು ತನ್ನ ಭೂಮಿಗೆ ಹಕ್ಕುಳ್ಳ ಪ್ರಜೆ ಎಂದು ಪರಿಗಣನೆ. | ರೈತನ ಭೂಮಿಗೇ ರೈತನು ಒಡೆಯನಲ್ಲ! ಆತ ತನ್ನ ಭೂಮಿಗೇನೆ ಹಕ್ಕಿಲ್ಲದ ಜಾನುವಾರು ಎಂಬ ಧೋರಣೆ. |

## ಪ್ರಜ್ಞಾವಂತ ಪ್ರಜೆಗಳೇ

**ಇಷ್ಟು ಉದಾಹರಣೆಗಳು ಸಾಕಲ್ಲವೆ? ಒಂದು ಅನ್ನದ ಅಗಳು ಹಿಚುಕಿ ನೋಡಿದರೆ ಅದೇನೆಂದು ತಿಳಿಯಲು ಸಾಕಲ್ಲವೆ? ಬ್ರಿಟೀಷ್ ವಸಾಹತುಶಾಹಿ ಗುಲಾಮಗಿರಿ ಭೂಸ್ವಾದೀನ ಕಾಯ್ದೆಗಿಂತಲು ಈ ಭೂಸ್ವಾಧೀನ ಸುಗ್ರೀವಾಜ್ಞೆಯ ಕಾಯ್ದೆಯು ಕರಾಳವಲ್ಲವೆ? ನಾವು ಮುಂದುಗೆ ಹೋಗುತ್ತಿದ್ದೇವೋ ಅಥವಾ ಹಿಂದುಗೆ ಹೋಗುತ್ತಿದ್ದೇವೋ? ಹೇಳಿ? ಇದು 'ಗೂಂಡಾ ನಿಯಂತ್ರಣ' ಕಾಯ್ದೆಯನ್ನು 'ಗೂಂಡಾ ಸಮ್ಮತಿ' ಕಾಯ್ದೆಯಾಗಿ ತಿದ್ದುಪಡಿ ಮಾಡಿ ಎರಡನ್ನೂ ಒಂದೇ ಎಂದು ಹೇಳಿದಂತಾಗುವುದಿಲ್ಲವೆ? ಜನರಿಂದ ಆಯ್ಕೆಯಾದವರು ಇಂಥಾ ಕರಾಳ ಮಸೂದೆ ಮಾಡಲು ಸಖ್ಯವೆ?**

**ಹಾಗಾದರೆ ಇಂದು ಭಾರತವನ್ನು ಆಳ್ವಿಕೆ ಮಾಡುತ್ತಿರುವವರು ಯಾರು? ಹಾಗಾದರೆ ಭಾರತದ ಪ್ರದಾನಿ ಮೋದಿಯವರು, ಅದಾನಿ, ಅಂಬಾನಿ ವಗೈರೆ ಬಂಡವಾಳಿಗರ ಮುಖವಾಡವೆ? ಅಂದರೆ ಇದು ಮೊದಾನಿ, ಮೊಂಬಾನಿ ಜಂಟಿ ಆಳ್ವಿಕೆಯೇ?**

**ಪ್ರಜ್ಞಾವಂತ ಮತದಾರರೆ ! ಈಗಲಾದರೂ ತಾವು ಆಲೋಚಿಸಬೇಕು. ಈ ಮಸೂದೆ ಜಾರಿಗೆ ಬಂದರೆ ಭೂ ಭಕ್ಷಕರ ಕೈಗೆ ದೇಶ ಕೊಟ್ಟಂತಾಗುತ್ತದೆ. ಈ ಭಕ್ಷಕರು ನಮ್ಮ ಮಾತ್ರ ಭೂಮಿಯನ್ನು ಮಾತ್ರವಲ್ಲಾ, ನಮ್ಮ ಪ್ರಜಾಪ್ರಭುತ್ವ, ಜನತಂತ್ರ ವ್ಯವಸ್ಥೆ, ಪತ್ರಿಕಾರಂಗ, ನ್ಯಾಯಾಂಗ ಎಲ್ಲವನ್ನೂ ಧ್ವಂಸಿಸಿ ಸಮಾಧಿ ಮಾಡಿಬಿಡುತ್ತಾರೆ !**

**ಇದು ಎಚ್ಚರಗೊಳ್ಳಬೇಕಾದ ಕಾಲ, ಪ್ರಜ್ಞಾವಂತ ಪ್ರಜೆಗಳೇ ಈಗ ತಾವು ಮಾತನಾಡಬೇಕು. ತಾವು ಕ್ರಿಯಾಶೀಲರಾಗಬೇಕು.**